ಆ) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬದುವಿನ ಬಾಕಿಯನ್ನು ಪೂರ್ತಿ ಮನ್ನಾ ಮಾಡಲು ಸರ್ಕಾರವು ಈಗಾಗಲೇ ಆದೇಶ ಹೊರಡಿಸಿದೆ. ಇನ್ನು ಇತರೇ ರೈತರಿಂದ ದಿನಾಂಕ ೩೧-೩-೧೯೮೮ರಂದು ಇದ್ದ ಬದುವಿನ ಬಾಕಿ ಹಣದಲ್ಲಿ ಶೇಕಡ ೫೦ರಷ್ಟು ಹಣವನ್ನು ದಿನಾಂಕ ೩೧-೩-೧೯೮೮ರ ಒಳಗಾಗಿ ಪಾವತಿ ಮಾಡಿದರೆ ಉಳಿದ ಶೇಕಡ ೫೦ರಷ್ಟು ಬಾಕಿ ಹಣವನ್ನು ಮನ್ನಾ ಮಾಡುವುದಾಗಿಯೂ ಸಹ ದಿನಾಂಕ ೨೫-೫-೮೮ರಂದು ಸರ್ಕಾರ ಆದೇಶವನ್ನು ಹೊರಡಿಸಿದೆ.

ಇ) ಮೇಲಿನ 'ಆ' ಉತ್ತರದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರೈತರು ಬಾವಿ ತೋಡುವಾಗ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳುವ ಬಗ್ಗೆ

೨೦೭೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರು ತಮ್ಮ ಕೃಷಿಸಾಯ ಜಮೀನುಗಳಲ್ಲಿ ನೀರಾವರಿ ಬಾವಿಗಳನ್ನು ತೋಡುವಾಗ ಸರ್ಕಾರದ ಅನುಮತಿ ಪಡೆಯುವಂತೆ ಕಾಯ್ದೆ ತರುವ ಬಗ್ಗೆ ಸರ್ಕಾರವು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಕಾಯ್ದೆ ತರಲಾಗುವುದು,

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಸಚಿವರು).—

ಅ) ಹೌದು.

ಆ) ಕರಡು ಕಾನೂನು ಸಚಿವ ಸಂಪುಟದ ಉಪ-ಸಮಿತಿಯ ಪರಿಶೀಲನೆಯಲ್ಲಿದೆ. ನಂತರ ಸದರಿ ಕಾನೂನನ್ನು ಜಾರಿಗೆ ತರುವ ಬಗ್ಗೆ ಆಲೋಚಿಸಲಾಗುವುದು.

ವಾಣಿಜ್ಯ ಶಿಕ್ಷಣ ಶಾಲೆಗಳಲ್ಲಿ ಹೆಚ್ಚು ಮಾಸಿಕ ಶುಲ್ಕವನ್ನು ವಸೂಲು ಮಾಡುತ್ತಿರುವುದು

೨೦೫೧. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಸರ್ಕಾರ ವಾಣಿಜ್ಯ ಶಾಲೆಗಳಲ್ಲಿನ ಮಾಸಿಕ ಶುಲ್ಕವನ್ನು ಹೆಚ್ಚಿಸದಿದ್ದರೂ (ಶೀಘ್ರಲಿಪಿ ಬೆರಳಚ್ಚು ಇತ್ಯಾದಿ ವಿಷಯಗಳಿಗೆ) ಸಹ ಕರ್ನಾಟಕ ರಾಜ್ಯ ವಾಣಿಜ್ಯ ಶಾಲೆಗಳ ಸಂಘದ (ಕಾಮರ್ಸ್ ಇನ್‌ಸ್ಟಿಟ್ಯೂಟ್ ಅಸೋಸಿಯೇಷನ್ ಆಫ್ ಕರ್ನಾಟಕ) ಆದೇಶದ ಮೇರೆಗೆ ವಾಣಿಜ್ಯ ಶಾಲೆಗಳಲ್ಲಿ ಕಳೆದ ಎರಡು ತಿಂಗಳುಗಳಿಂದ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

೨) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರಕ್ಕೆ ದೂರುಗಳೇನಾದರೂ ಬಂದಿವೆಯೇ?

೩) ಸರ್ಕಾರದವರು ಹೆಚ್ಚಿನ ಶುಲ್ಕವನ್ನು ವಸೂಲು ಮಾಡಬಾರದೆಂದು ಸೂಚನೆ ನೀಡಿದ್ದರೂ ಅದನ್ನು ನಿರ್ಲಕ್ಷಿಸಿ, ಹೆಚ್ಚಿನ ಶುಲ್ಕವನ್ನು ವಸೂಲು ಮಾಡುತ್ತಿರುವುದು ನಿಜವೇ?

೪) ಹಾಗಿದ್ದಲ್ಲಿ ಸದರಿ ಸಂಘದ ಮಾನ್ಯತೆಯನ್ನು ರದ್ದುಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು),—

೧) ಹಾದು.

೨) ಹೌದು.

ಖ) ಹೌದು.

ಳ) ಕಾನೂನಿನ ಪ್ರಕಾರ ಕ್ರಮ ತೆಗೆದುಕೆ ಳ್ಳಲಾಗುವುದು.

ರಾಜ್ಯದಲ್ಲಿರುವ ರಾಷ್ಟ್ರೀಯ ಹಾಗೂ ಪ್ರಾಂತೀಯ ಹೆದ್ದಾರಿಗಳು

೧೫೯೪. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಎಷ್ಟು, ಪ್ರಾಂತೀಯ ಹೆದ್ದಾರಿ ಎಷ್ಟು?

ಆ) ಯಾವ ಯಾವ ರಾಷ್ಟ್ರೀಯ ಹೆದ್ದಾರಿಗಳನ್ನು ಮತ್ತು ಯಾವ ಯಾವ ಪ್ರಾಂತೀಯ ಹೆದ್ದಾರಿಗಳನ್ನು ಏಕ ಕಾಲದಲ್ಲಿ ನಾಲ್ಕು ವಾಹನಗಳು ಸಂಚಾರ ಮಾಡಲು ಯೋಗ್ಯ ರಸ್ತೆಯನ್ನಾಗಿ ಪರಿವರ್ತಿಸಲು ಸರ್ಕಾರವು ಆಲೋಚಿಸಿದೆಯೇ?

ಇ) ಇದಕ್ಕೆ ತಗಲುವ ವೆಚ್ಚದಲ್ಲಿ ಕೇಂದ್ರ ಸರ್ಕಾರದವರ ಹಾಗೂ ರಾಜ್ಯ ಸರ್ಕಾರದವರ ಕೊಡುಗೆಗಳೇನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ರಾಷ್ಟ್ರೀಯ ಹೆದ್ದಾರಿಗಳು — ೭

ರಾಜ್ಯ ಹೆದ್ದಾರಿಗಳು — ೭೬

ಆ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೭, ೪ ಮತ್ತು ೧೨ರಲ್ಲಿ ಒಟ್ಟು ೭೦ ಕಿ.ಮೀ. ಉದ್ದದಷ್ಟು ಭಾಗಗಳನ್ನು ಏಳನೆಯ ಯೋಜನೆಯ ಅವಧಿಯಲ್ಲಿ ನಾಲ್ಕು ವಾಹನಗಳ ಮಾರ್ಗವನ್ನಾಗಿ ಮಾಡುವ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದವರು ಹಾಕಿಕೊಂಡಿರುತ್ತಾರೆ.

ಬೆಂಗಳೂರು ಮೈಸೂರು ನಡುವೆ ನಾಲ್ಕು ಪಥಗಳ ಹೆದ್ದಾರಿಯನ್ನು ಮಾಡುವುದನ್ನು ರಾಜ್ಯ ಸರ್ಕಾರವು ಆಲೋಚಿಸಿದೆ.

ಇ) ರಾಷ್ಟ್ರೀಯ ಹೆದ್ದಾರಿಗಳಿಗೆ ತಗಲುವ ಒಟ್ಟು ಖರ್ಚಿನ ಮೊತ್ತ ರೂ. ೯೭೦ ಲಕ್ಷ ಪೂರ್ತಿ ಹಣ ಕೇಂದ್ರ ಸರ್ಕಾರದಿಂದ ಕೊಡಲಾಗುತ್ತದೆ. ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿಯ ಬಗ್ಗೆ ಇನ್ನೂ ಸಮೀಕ್ಷೆ ನಡೆಸಲಾಗುತ್ತಿದೆ.

ರಾಜ್ಯದಲ್ಲಿರುವ ಹೆದ್ದಾರಿಗಳ ಬಗ್ಗೆ

೧೫೭೪. ಶ್ರೀ ಜಿ. ರಾಜೂಗೌಡ, (ಹನೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಎಷ್ಟು ಉದ್ದ ಇದೆ. ಪ್ರಾಂತೀಯ ಹೆದ್ದಾರಿ ಎಷ್ಟಿದೆ ?

ಆ) ಯಾವ ಯಾವ ರಾಷ್ಟ್ರೀಯ ಹೆದ್ದಾರಿಗಳನ್ನು ಮತ್ತು ಪ್ರಾಂತೀಯ ಹೆದ್ದಾರಿಗಳನ್ನು ಏಕ ಕಾಲದಲ್ಲಿ ನಾಲ್ಕು ವಾಹನಗಳು ಸಂಚರಿಸಲು ಯೋಗ್ಯವನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ?

ಇ) ಇದಕ್ಕೆ ತಗಲಬಹುದಾದ ವೆಚ್ಚ ವೆಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ರಾಷ್ಟ್ರೀಯ ಹೆದ್ದಾರಿ — ೧೯೬೮.೨೦ ಕಿ.ಮೀ.

ರಾಜ್ಯ ಹೆದ್ದಾರಿ — ೧೦೯೫೧.೦೦ ಕಿ.ಮೀ.

ಆ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೭, ೪ ಮತ್ತು ೧೨ರ ರಸ್ತೆಗಳಲ್ಲಿ ಒಟ್ಟು ೭೦ ಕಿ.ಮೀ. ಉದ್ದದ ಕೆಲವು ಭಾಗಗಳನ್ನು ಏಳನೆಯ ಯೋಜನಾ ಅವಧಿಯಲ್ಲಿ ನಾಲ್ಕು ವಾಹನ ಮಾರ್ಗವನ್ನಾಗಿ ಮಾಡುವ